9. ಮೂಢನಂಬಿಕೆ

ಹ. ಮ. ಪೂಜಾರ

ಅನೇಕ ವರ್ಷಗಳ ಹಿಂದೆ ಕೋರಹಳ್ಳಿ ಎಂಬ ಗ್ರಾಮದಲ್ಲಿ ತಿಪ್ಪಣ್ಣ ಮತ್ತು ಲಕ್ಕಮ್ಮ ಎಂಬ ದಂಪತಿಗಳಿದ್ದರು. ಸಾತ್ವಿಕ ಸ್ವಭಾವದ ಈ ದಂಪತಿಗಳು ಎಲ್ಲರ ಜೊತೆಗೂ ಹೊಂದಿಕೊಂಡಿದ್ದರು. ಇವರಿಗೆ ಯಾವುದೇ ಆಸ್ತಿ ಇರಲಿಲ್ಲ. ಹೀಗಾಗಿ ಈ ದಂಪತಿಗಳು ಇಂಬು ಕೊಟ್ಟವರಲ್ಲಿ ನಂಬುಗೆಯಿಂದ ದುಡಿದು ಉಂಡುಟ್ಟು ಸುಖವಾಗಿದ್ದರು.

ತಿಪ್ಪಣ್ಣನಿಗೆ ಮಕ್ಕಳು ಆಗಿರಲಿಲ್ಲ. ಮಕ್ಕಳಿಲ್ಲದ ಚಿಂತೆ ತಿಪ್ಪಣ್ಣನಿಗಿಂತ ಲಕ್ಕಮ್ಮಳಿಗೆ ಹೆಚ್ಚಾಗಿತ್ತು. ಸಂತಾನ ಪ್ರಾಪ್ತಿಗಾಗಿ ಎಲ್ಲಾ ದೇವರಿಗೂ ಹರಕೆ ಸಲ್ಲಿಸಿದರು. ಆದರೂ ಲಕ್ಕಮ್ಮನ ಆಶೆ ಈಡೇರಲಿಲ್ಲ. ''ಊರದೇವಿಗೆ ಮರಿ ಮಾಡಿದರೆ ಮಕ್ಕಳಾಗುತ್ತವೆ'' ಎಂದು ಒಬ್ಬ ಅಜ್ಜಿ ಹೇಳಿದ್ದರಿಂದ, ಒಂದು ದಿನ ದಂಪತಿಗಳು ಒಂದು ಕುರಿಯನ್ನು ಹಿಡಿದುಕೊಂಡು ಹೊರಟಿದ್ದರು. ಅಷ್ಟರಲ್ಲಿ ಎದುರಿಗೆ ಕೃಷ್ಣಾಜಿ ಮಾಸ್ತರರು ಬಂದರು. ''ಏನಪ್ಪಾ ತಿಪ್ಪಣ್ಣ ಹಾಲು ಹೈನಿಗಾಗಿ ಕುರಿ ಖರೀದಿ ಮಾಡಿದಿ ಏನು'' ಎಂದು ಕೇಳಿದರು. ಲಕ್ಕಮ್ಮ ಸಂತಾನಪ್ರಾಪ್ತಿಗಾಗಿ ಊರದೇವಿಗೆ ಬಲಿಕೊಡುವ ವಿಚಾರ ಹೇಳಿದಳು.

''ನೋಡು ಲಕ್ಕಮ್ಮ ದೇವರಿಗೆ ಪ್ರಾಣಿ ಬಲಿಕೊಡಬಾರದು. ಅದು ಮೂಢನಂಬಿಕೆ. ಅದರಿಂದ ಏನೂ ಸಾಧಿಸಿದಂತಾಗುವುದಿಲ್ಲ. ಎಲ್ಲ ಪ್ರಾಣಿಗಳನ್ನು ದೇವರೇ ಹುಟ್ಟಿಸಿದ್ದಾನೆ ಅಂದಬಳಿಕ ದೇವರೇ ಬಲಿ ಕೇಳುವದೆಂತು? ಇದರಿಂದ ನಮಗೆ ಒಳ್ಳೆಯದಂತೂ ಆಗುವದೇ ಇಲ್ಲ, ಕೇಡಾಗುತ್ತದೆ. ಆದ್ದರಿಂದ ಈ ಪ್ರಾಣಿ ಬಲಿ ಕೊಡುವ ವಿಚಾರ ಬಿಟ್ಟುಬಿಡು'' ಎಂದು ತಿಳಿಸಿ ಹೇಳಿದರು ಕೃಷ್ಣಾಜಿ ಮಾಸ್ತರರು. ಇದಕ್ಕೆ ದಂಪತಿಗಳು ಒಪ್ಪಿದರು. ಹೀಗೆಯೇ ಕೆಲವು ವರ್ಷಗಳು ಗತಿಸಿದ ಬಳಿಕ ಲಕ್ಕಮ್ಮ ಒಂದು ಗಂಡು ಮಗುವಿಗೆ ಜನ್ಮಕೊಟ್ಟಳು. ದಂಪತಿಗಳಿಬ್ಬರೂ ಸಂತೋಷಪಟ್ಟರು. ವಾಡಿಕೆಯಂತೆ ಮಗು ಹುಟ್ಟಿದ ಕೂಡಲೆ ತಿಪ್ಪಣ್ಣ ಹೊತ್ತಿಗೆ ತೆಗೆಯಿಸಿ ಕೇಳಿದ. ''ಮಗು ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದೆಯೆಂದೂ ಇದರಿಂದ ತಂದೆ-ತಾಯಿಗಲ್ಲದೇ ಇಡೀ ಊರಿಗೂ ಕೇಡಾಗುವದೆಂದು'' ಹೊತ್ತಿಗೆ ಹೇಳುವವರು ಹೇಳಿದರಂತೆ. ಈ ವಿಷಯ ಕಿವಿಯಿಂದ ಕಿವಿಗೆ ಊರು ತುಂಬಾ ಹರಡಿತು. ''ದೇವಿಗೆ ಬಲಿ ಕೊಡಲು ಒಯ್ದ ಕುರಿಯನ್ನು ತಿರುಗಿ ತಂದದ್ದರಿಂದ ದೇವಿ ಸಿಟ್ಟಾಗಿ ಹೀಗಾಯಿತೆಂದು'' ಕೆಲವು ಜನ ಮಾತಾಡಿಕೊಂಡರು. ಮಗನಿಗೆ ದಂಪತಿಗಳು ಪ್ರೀತಿಯಿಂದ ವೆಂಕಪ್ಪನೆಂದು ಹೆಸರಿಟ್ಟರು. ಮಗನ ಭವಿಷ್ಯದ ಬಗ್ಗೆ ಊರಲ್ಲಿ ಜನರಾಡುವ ಮಾತಿಗೆ ತಿಪ್ಪಣ್ಣ ಕೊರಗತೊಡಗಿದ. ಮನಸ್ಸಿನಲ್ಲಿ ಮನೆ ಮಾಡಿದ ಚಿಂತೆ ಚಿತೆಯಾಗಿ ಅವನ ಪ್ರಾಣವನ್ನೇ ತೆಗೆದುಕೊಂಡಿತು.

ಲಕ್ಕಮ್ಮಳಿಗೆ ಆಕಾಶವೇ ಕಳಚಿಬಿದ್ದಂತಾಯಿತು. ಆಕೆಗೂ ಮುಂದೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ಮಗುವಿನ ಭವಿಷ್ಯದ ಚಿಂತೆಯ ಜೊತೆಗೆ ಪತಿ ತೀರಿದ ಚಿಂತೆ. ಹೀಗೆ ಲಕ್ಕಮ್ಮಳ ಜೀವನದಲ್ಲಿಯೂ ನೆಮ್ಮದಿ ಉಳಿಯಲಿಲ್ಲ. ಮಗು ವೆಂಕಪ್ಪ ನಾಲ್ಕು ವರುಷದವನಾಗುವಷ್ಟರಲ್ಲಿ ಅವಳೂ ಇಹಲೋಕಯಾತ್ರೆ ಮುಗಿಸಿದಳು.

ವೆಂಕನ ತಂದೆ ತಾಯಿ ಇಬ್ಬರೂ ತೀರಿಕೊಂಡದ್ದರಿಂದ ಹೊತ್ತಿಗೆಯ ಭವಿಷ್ಯ ನಿಜವೆಂದೂ, ಇವನಿಂದ ಇನ್ನು ಊರಿಗೂ ಕೇಡಾಗುವದೆಂದು ಜನ ನಿರ್ಧರಿಸಿಬಿಟ್ಟರು. ವೆಂಕನನ್ನು ಯಾರೂ ಮುಟ್ಟಲು ಸಿದ್ಧರಿರಲಿಲ್ಲ. ಹೇಗಾದರೂ ಮಾಡಿ ಅವನನ್ನು ಊರಿಂದ ಹೊರಗೆ ಅಟ್ಟಬೇಕೆಂದರು. ಆದರೆ ತಬ್ಬಲಿ ವೆಂಕನಿಗೆ ಕೃಷ್ಣಾಜಿ ಮಾಸ್ತರರು ಆಶ್ರಯ ಕೊಟ್ಟರು. ''ವೆಂಕನು ಹುಟ್ಟಿದ ನಕ್ಷತ್ರದ ಕಾರಣಕ್ಕಾಗಿಯೇ ಅವನ ತಂದೆ ತಾಯಿ ತೀರಿದರೆಂದು'' ಹೇಳುವ ಜನಕ್ಕೆ ''ಯಾವ ನಕ್ಷತ್ರಗಳೂ ಕೆಟ್ಟವಿಲ್ಲ. ಅವರ ಸಾವಿಗೂ ವೆಂಕನ ಜನ್ಮಕ್ಕೂ ಏನೂ ನಂಟು ಇಲ್ಲ. ಅದೆಲ್ಲ ಮೂಢನಂಬಿಕೆ. ವೆಂಕನ ಭವಿಷ್ಯದ ಬಗ್ಗೆ ಜನರಾಡುವ ಚುಚ್ಚು ಮಾತಿಗೆ ನೊಂದು, ಬೆಂದು ಹೋದರಲ್ಲದೆ ಇನ್ನಾವ ಕಾರಣವಿಲ್ಲ'' ಎಂದು ತಿಳಿಸಿ ಹೇಳಿದರು.

ಕಾಕತಾಳಿ ನ್ಯಾಯವೆಂಬಂತೆ ಒಂದು ವರ್ಷ ಊರಲ್ಲಿ ಜನ ರೋಗ ರುಜಿನಗಳಿಂದ ಬಳಲತೊಡಗಿದರು. ಮತ್ತು ಮಳೆ ಆಗದೆ ಬರಗಾಲವೂ ಬಿದ್ದಿತು. ಇದಕ್ಕೆಲ್ಲ ವೆಂಕನ ಜನ್ಮ ನಕ್ಷತ್ರವೇ ಕಾರಣವೆಂದೂ, ವೆಂಕನೊಬ್ಬ ಈ ಊರ ಪೀಡೆಯೆಂದು ಜನರು ಆಡತೊಡಗಿದರು. ಮತ್ತು ವೆಂಕನನ್ನು ಊರು ಬಿಡಿಸಬೇಕೆಂದು ಕೃಷ್ಣಾಜಿ ಮಾಸ್ತರರಿಗೆ ಊರ ಜನ ಕೇಳಿಕೊಂಡರು.

''ಬಂಧುಗಳೇ ಊರಲ್ಲಿ ರೋಗ ಹರಡುವದಕ್ಕಾಗಲಿ ಮಳೆ ಬಾರದೇ ಇರುವದಕ್ಕಾಗಲಿ ಈ ತಬ್ಬಲಿ ವೆಂಕ ಕಾರಣನಲ್ಲ. ಊರಲ್ಲಿ ಅಲ್ಲಲ್ಲಿ ಕೊಳಚೆ ನೀರು ನಿಂತು ಊರು ಹೊಲಸಾಗಿ ರೋಗಾಣುಗಳು ಬೆಳೆದು ರೋಗ ಹರಡಿದೆ. ಮನೆ ಕಟ್ಟಲಿಕ್ಕೆಂದು, ಉರುವಲಿಕ್ಕೆಂದು ಊರ ಮುಂದಿನ ಅರಣ್ಯವನ್ನೇ ನಾಶ ಮಾಡಿದಿರಿ. ಇದರಿಂದ ಮಳೆ ಹೋಗಿದೆ. ಇದೆಲ್ಲವನ್ನು ತಿಳಿದುಕೊಳ್ಳದೆ ಮೂಢನಂಬಿಕೆಯೆಂಬ ಕತ್ತಲೆಯಲ್ಲಿ ಕುರುಡರಾಗಿರುವಿರಿ'' ಎಂದು ಕೃಷ್ಣಾಜಿ ಮಾಸ್ತರರು ತಿಳಿಸಿ ಹೇಳಿದರು.

ಕೃಷ್ಣಾಜಿ ಮಾಸ್ತರರ ಸಲಹೆಯಂತೆ ಊರ ಜನರೆಲ್ಲ ಸೇರಿ ಊರನ್ನೆಲ್ಲ ಕಸಗುಡಿಸಿ ಸ್ವಚ್ಛಗೊಳಿಸಿದರು. ಚರಂಡಿಯ ನೀರು ಊರ ಹೊರಗೆ ಹರಿದು ಹೋಗುವಂತೆ ಮಾಡಿ ಕೊಳಚೆ ಪ್ರದೇಶಗಳ ನಿರ್ಮೂಲನೆ ಮಾಡಿದರು. ಪ್ರತಿಯೊಬ್ಬರೂ ಒಂದೊಂದು ಸಸಿ ನೆಟ್ಟು ಪೋಷಿಸಿ ಬೆಳೆಸಿದರು. ಅಂದಿನಿಂದ ಊರ ಜನರೆಲ್ಲರೂ ನೆಮ್ಮದಿಯಿಂದ ಬಾಳತೊಡಗಿದರು. ಜನರ ಮನದಲ್ಲಿ ಬೇರೂರಿದ್ದ ಮೂಢನಂಬಿಕೆಗಳು ದೂರಾದವು. ಮತ್ತು ಊರ ಜನರೆಲ್ಲ ತಬ್ಬಲಿ ಬಾಲಕ ವೆಂಕಪ್ಪನನ್ನು ಪ್ರೀತಿಯಿಂದ ಕಾಣತೊಡಗಿದರು. ಇದನ್ನೆಲ್ಲ ಕಂಡು ಕೃಷ್ಣಾಜಿ ಮಾಸ್ತರರು ಸಂತೋಷಪಟ್ಟರು.

ಶಬ್ದಗಳ ಅರ್ಥ

ಸಾತ್ವಿಕ – ಒಳ್ಳೆಯ; **ಇಂಬು** – ಆಶ್ರಯ; **ಮರಿಮಾಡು** – ಕುರಿಯನ್ನು ಬಲಿಕೊಡು; **ಹೈನು** – ಹಾಲು, ಮೊಸರು **ಮೂಢನಂಬಿಕೆ** – ತಿಳುವಳಿಕೆಯಿಲ್ಲದ ನಂಬಿಕೆ; **ಹೊತ್ತಿಗೆ** – ಗ್ರಂಥ (ಪಂಚಾಂಗ); **ನೆಮ್ಮದಿ** –ಸಂತೋಷ; **ತಬ್ಬಲಿ** – ಅನಾಥ

ಕೃತಿ-1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1) ಕೋರಹಳ್ಳಿ ಎಂಬ ಗ್ರಾಮದಲ್ಲಿ ವಾಸವಿದ್ದ ದಂಪತಿಗಳ ಹೆಸರೇನು ?

2) ಈ ದಂಪತಿಗಳಿಗೆ ಅಜ್ಜಿ ಏನು ಹೇಳಿದಳು ?

3) ಕುರಿಯನ್ನು ಹಿಡಿದುಕೊಂಡು ಹೊರಟ ದಂಪತಿಗಳಿಗೆ ಕೃಷ್ಣಾಜಿ ಮಾಸ್ತರ ಏನು ಕೇಳಿದರು ?

4) ಕೃಷ್ಣಾಜಿ ಮಾಸ್ತರರು ಏಕೆ ಸಂತೋಷ ಪಟ್ಟರು ?

ಕೃತಿ-2) ಕಂಸಿನಲ್ಲಿ ಕೊಟ್ಟ ಪದಗಳನ್ನು ಬಳಸಿ ಬಿಟ್ಟಸ್ಥಳಗಳನ್ನು ಪೂರ್ಣಮಾಡಿರಿ.

(ಕೃಷ್ಣಾಜಿ ಮಾಸ್ತರ, ಮಕ್ಕಳಿಲ್ಲದ, ಸಾತ್ವಿಕ, ನೆಮ್ಮದಿಯಿಂದ, ಮೂಢನಂಬಿಕೆ)

1) ಕೋರಹಳ್ಳಿ ಗ್ರಾಮದಲ್ಲಿ ವಾಸವಿದ್ದ ದಂಪತಿಗಳು ------------- ಸ್ವಭಾವದವರಾಗಿದ್ದರು.

2) ದೇವರಿಗೆ ಪ್ರಾಣಿ ಬಲಿಕೊಡುವುದು ------------ ಆಗಿದೆ.

3) ತಬ್ಬಲಿಯಾದ ವೆಂಕನಿಗೆ ------------------- ಆಶ್ರಯ ನೀಡಿದರು.

4) ಅಂದಿನಿಂದ ಊರ ಜನರೆಲ್ಲರ ---------------------- ಬಾಳತೊಡಗಿದರು.

5) ತಿಪ್ಪಣ್ಣ ಹಾಗೂ ಲಕ್ಕಮ್ಮ ದಂಪತಿಗಳಿ ------------------ ಚಿಂತೆ ಇತ್ತು.

ಕೃತಿ -3) ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ.

ವಿವಿಧ ಪ್ರಕಾರದ ಮೂಢನಂಬಿಕೆಗಳು

ಕೃತಿ -4) ಕೆಳಗಿನ ವಾಕ್ಯಗಳಲ್ಲಿಯ ಗೆರೆ ಹೊಡೆದ ಶಬ್ದಗಳಲ್ಲಿಯ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ

''ಮಾಧುರಿಯು ಕಾರವಾರದಿಂದ ಬರೆದ ಪತ್ರವನ್ನು ಮನೆಯಲ್ಲಿ ಎಲ್ಲರೂ ಅಕ್ಕರೆಯಿಂದ ಓದಿದರು. ಅವರಿಗೆ ಸಂತೋಷವಾಯಿತು. ಆ ಪತ್ರಕ್ಕೆ ಅವರು ತಕ್ಷಣವೇ, ಉತ್ತರ ಬರೆಯಲು ನಿರ್ಧರಿಸಿದರು.

ಕೃತಿ -5) ಮೂಢನಂಬಿಕೆಯ ನಿರ್ಮೂಲನೆಗಾಗಿ ನೀವು ಏನು ಮಾಡುತ್ತೀರಿ ಎಂಬುದನ್ನು ಏಳೆಂಟು ಸಾಲುಗಳಲ್ಲಿ ಬರೆಯಿರಿ.

CQNJK4